## ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.

### ಅಪರಾಧ ಪ್ರಕರಣ ಸಂಖ್ಯೆಃ 1023/2018

| | | |
|---|---|---|
| **ಹೆಸರು** | ರಮೇಶ | ಚಾಸಾ-10 |
| **ತಂದೆಯ ಹೆಸರು** | ಲಕ್ಕಯ್ಯ | |
| **ಉದ್ಯೋಗ** | ವ್ಯವಸಾಯ | ಪ್ರಾಸಾ-5 |
| **ವಾಸ ಸ್ಥಳ** | ನರಸಿನಕುಪ್ಪೆ ಗ್ರಾಮ | |
| **ದಿನಾಂಕಃ 09.01.2025**ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ಆರೋಪಿಯ ಪರಿಚಯ ನನಗೆ ಇರುತ್ತದೆ. ಮೃತ ಸುಂದರ್ ರವರು ನನಗೆ ಪರಿಚಯ ಇರುವುದಿಲ್ಲ. ನಿಪಿ 4 ರಲ್ಲಿ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ 4(ಸಿ) ಎಂದು ಗುರುತಿಸಲಾಯಿತು. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಿಪಿ 4 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ 4(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ. ನಿಪಿ 5 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಸಹಿಯನ್ನು ನಿಪಿ 5(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಸಾಕ್ಷಿಗೆ ಪ್ರತಿಕೂಲ ಸಾಕ್ಷಿಯನ್ನು ನುಡಿಯುತ್ತಿರುವುದರಿಂದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕ ರವರಿಂದ.**

ದಿನಾಂಕ 10.10.2018 ರಂದು ಪೊಲೀಸರು ಅತ್ನಿ ಗ್ರಾಮದ ಬಳಿ ಕೆಂಚೇಗೌಡರ ಜಮೀನಿನ ಮುಂದೆ ರಸ್ತೆಯ ಮೇಲೆ ಆ ದಿನ ಪೊಲೀಸರು ಮಹಜರ್ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ. ಸದರಿ ಮಹಜರನ್ನು ಆ ದಿನ ಬೆಳಿಗ್ಗ 10.00 ರಿಂದ 10.45 ರವರೆಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ನನ್ನೊಂದಿಗೆ ಯೋಗೇಗೌಡ ಮತ್ತು ನಿರ್ವಾಣಯ್ಯ ರವರೂ ಸಹ ಸದರಿ ಮಹಜರ್ ಗೆ ಸಹಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆನಂದರವರು ಸುಂದರ್ ರವರಿಗೆ ಅಪಘಾತ ಮಾಡಿದ ಸಂಬಂದ ಪೊಲೀಸರು ಅಪಘಾತವಾದ ಸ್ಥಳಕ್ಕೆ ಮಹಜರ್ ಮಾಡಲು ಬಂದಿದ್ದರು ಆಗ ನಾನು ಸಾಕ್ಷಿದಾರನಾಗಿ ಇದ್ದೆ ಎಂದರೆ ಸರಿಯಲ್ಲ. ದಿನಾಂಕ 20.10.2018

ರಂದು ನಿಪಿ 5(ಸಿ) ರಲ್ಲಿರುವ ನನ್ನ ಸಹಿಯನ್ನು ನಾನು ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ ಎಂದರೆ ಸರಿ. ಸದರಿ ಸಹಿಯನ್ನು ಪೊಲೀಸರು ನನ್ನ ಸಮಕ್ಷಮ ಒಂದು ದ್ವಿ ಚಕ್ರ ವಾಹನವನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಆ ದಿನ ಮಧ್ಯಾಹ್ನ 4.00 ರಿಂದ 4.45 ರವರೆಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ತಿಳಿದಿದ್ದರೂ ಆರೋಪಿಗೆ ಸಹಾಯ ಮಾಡುವ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>**

ಪಾಟೀ ಸವಾಲು ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು,**
**ಅರಕಲಗೂಡು.**